ಬೆಳಿಗ್ಗೆ ಬೇಗನೆ ಎದ್ದು ನಮ್ಮ ಗುರಿಯಾದ ಕೈಲಾಸ-ಮಾನಸ ಸರೋವರಕ್ಕೆ ಪೂರ್ವದಿಕ್ಕಿನ ಕಡೆಗೆ ಪ್ರಯಾಣ ಮುಂದುವರೆಸಿದೆವು.

ಹೀಗೆ ನಾನು ಸಾಗುತ್ತಿದ್ದಾಗ ಸುಮಾರು ೨೦೦ ಮೇಕೆ, ಕುರಿಗಳ ಹಿಂಡಿನೊಂದಿಗೆ ಇದ್ದ ಒಬ್ಬ ಕುರುಬನನ್ನು ಕಂಡೆ. ಅವನಿಂದ ಆಹಾರ ಪಡೆಯಬಹುದೆಂದು ನಾನು ಯೋಚಿಸಿದೆ. ದೂರದಿಂದಲೇ ನಾನು ಅವನನ್ನು ಕೂಗಿದೆ. ಅವನ ಕುರಿಮಂದೆ ನಿದ್ದೆ ಮಾಡುತ್ತಿತ್ತು. ಅವನು, 'ಖೀ ಖೀ' (ನಾಯಿ ನಾಯಿ) ಎಂದು ಟಿಬೆಟ್ ಭಾಷೆಯಲ್ಲಿ ಜೋರಾಗಿ ಕಿರುಚಿದ. ಕುರುಬರು ತೋಳಗಳ ಆಕ್ರಮಣದಿಂದ ಕುರಿಗಳನ್ನು ಕಾಪಾಡಲು ಈ ನಾಯಿಗಳನ್ನು ಜೊತೆಯಲ್ಲಿ ಕರೆದುಕೊಂಡು ಬರುತ್ತಾರೆ. ಅವನ ನಾಯಿಯನ್ನು ಅವನು ನಿಯಂತ್ರಿಸಬೇಕೆಂದು ನಾನು ಬಯಸಿದೆ. ಆದರೆ ಅದು ನನ್ನೆಡೆಗೇ ಓಡಿಬಂತು. ಅದರ ಆಕ್ರಮಣದಿಂದ ತಪ್ಪಿಸಿಕೊಳ್ಳಲು ನನ್ನ ಬಳಿ ಒಂದು ದೊಣ್ಣೆಯೂ ಇರಲಿಲ್ಲ. ನಾಯಿ ನನ್ನ ಮೇಲೆ ಹಾರಿ, ನನ್ನನ್ನು ಕೆಳಗೆ ಬೀಳಿಸಿ, ತೊಡೆಯನ್ನು ಕಚ್ಚಿ ಓಡಿಹೋಯಿತು. ನನ್ನ ಬಟ್ಟೆಯಲ್ಲಾ ಹರಿದು ಹೋಯಿತು. ಹೆಚ್ಚು ಆಳವಾದ ಗಾಯವಾಗಲಿಲ್ಲ. ನಾಯಿ ಮುದಿಯಾಗಿದ್ದು, ಅದರ ಹಲ್ಲುಗಳಲ್ಲಿ ಬಲವಿರಲಿಲ್ಲವೆಂದು ಕಾಣುತ್ತದೆ. ನನ್ನೊಡನೆ ತಂದಿದ್ದ ಔಷಧಿ ಪೆಟ್ಟಿಗೆ ಈಗ ಸಹಾಯಕ್ಕೆ ಬಂತು, ಚಿಕಿತ್ಸೆ ಮಾಡಿಕೊಂಡೆ. ನಾಯಿ ಕಡಿದದ್ದು ನನ್ನ ಮೇಲೆ ವಿಪರೀತ ಪರಿಣಾಮವನ್ನೇನೂ ಉಂಟುಮಾಡಲಿಲ್ಲ. ಭಾರತಕ್ಕೆ ಹಿಂತಿರುಗಿ ಬಂದ ಮೇಲೆ ನಮ್ಮ ಕಿಶನ್‌ಪುರ್ ಆಶ್ರಮದಲ್ಲಿ ನನ್ನ ಹೊಟ್ಟೆಯ ಮೇಲೆ ಹದಿಮೂರು ಇಂಜೆಕ್ಷನ್ ತೆಗೆದುಕೊಳ್ಳಬೇಕಾಯಿತು.

ನಾಯಿಯ ಕಡಿತದಿಂದ ಎದೆಗುಂದದೆ ನಾನು ನನ್ನ ಗುರಿಯತ್ತ ಪ್ರಯಾಣ ಮುಂದುವರೆಸಿದೆ. ನನ್ನೊಡನೆ ಪಯಣಿಸುತ್ತಿದ್ದ ಸಿಖ್ಖ್ ಬ್ರಹ್ಮಚಾರಿ ದಾರಿ ಮಧ್ಯೆ ಎಲ್ಲೋ ಮರೆಯಾಗಿ ಹೋದ.

ಪ್ರಖರ ಬೇಸಿಗೆಯಾದ್ದರಿಂದ ಸ್ವಲ್ಪ ನಡೆಯುವುದರಲ್ಲೇ ಆಯಾಸವಾಗುತ್ತಿತ್ತು. ಬಾಯಾರಿಕೆ ತಡೆಯಲಾಗದೆ ಒಂದು ಮನೆಯ ಮುಂದೆ ನಿಂತು ಸ್ವಲ್ಪ ಮಜ್ಜಿಗೆ ಬೇಕೆಂದು ಬೇಡಿದೆ. ಮನೆಯ ಯಜಮಾನ ಒಳಗೆ ಹೋಗಿ ಒಂದು ಚರ್ಮದ ಚೀಲ ತಂದ. ಅದು ಒಣಭೂಮಿಗಳಲ್ಲಿ ನೀರನ್ನು ಹಂಚುವ ಚೀಲದಂತೆ ಕಂಡಿತು. ಚೀಲವನ್ನು ತೆರೆಯುವ ಮುನ್ನ ಚೀಲವನ್ನು ಚೆನ್ನಾಗಿ ಕುಲುಕಿದ. ಅದನ್ನು ತೆರೆಯುತ್ತಿದ್ದಂತೆ 'ಸ್‌ಸ್....' ಎಂದು ಪಾನೀಯದ ಬಾಟಲಿ ತೆರೆದಾಗ ಬರುವಂತಹ ಶಬ್ದ ಬಂತು. ಅವನು ನನ್ನ ನೀರಿನ ಪಾತ್ರೆಗೆ ಆ ಮಜ್ಜಿಗೆಯನ್ನು ಸುರಿದ. ಅದರಲ್ಲಿ ಮೇಕೆಯದೋ ಯಾಕ್‌ದೋ ಕೂದಲುಗಳು ತೇಲುತ್ತಿದ್ದುದನ್ನು ಕಂಡೆ. ಎಲ್ಲ ಕೂದಲುಗಳನ್ನೂ ಆಯ್ದು ತೆಗೆದೆಸೆದೆ. ಕುಡಿಯಲು ಬಾಯಿ ಹತ್ತಿರ ತಂದರೆ, ಕೆಟ್ಟು ಕೊಳೆತುಹೋದ ವಾಸನೆ ಮೂಗಿಗೆ ಬಡಿಯಿತು. ಇಷ್ಟು ಕೆಟ್ಟ ವಾಸನೆಯ ಮಜ್ಜಿಗೆಯನ್ನು ನಾನೆಂದೂ ಕುಡಿಯುತ್ತಿರಲಿಲ್ಲ, ಬಹಳ ಬಾಯಾರಿಕೆಯೂ ಆಯಾಸವೂ ಆಗಿದ್ದುದರಿಂದ ಮೂಗನ್ನು ಬಲವಾಗಿ ಮುಚ್ಚಿಕೊಂಡು, ವಿಧಿಯಿಲ್ಲದೆ ಕುಡಿಯಲೇಬೇಕಾಯಿತು.

ವಿಶ್ವಾಮಿತ್ರನಿಗೆ ಸಂಬಂಧಿಸಿದ ಒಂದು ಶ್ಲೋಕ ಆಗ ನೆನಪಾಯಿತು: ***'ಜೀವಿತಂ ಮರಣಾಚ್ಛ್ರೇಯಃ, ಜೀವನ್ ಧರ್ಮಮವಾಪ್ನುಯಾತ್'*** (ಸಾವಿಗಿಂತ ಬದುಕು ಲೇಸು, ಜೀವವಿದ್ದರೆ ಧರ್ಮವನ್ನು ಗಳಿಸಬಹುದು.) ಆ ಮುನಿಯ ಜೀವನದಲ್ಲಿ ನಡೆದ ಘಟನೆ ಈ ಹೇಳಿಕೆಗೆ ಕಾರಣವಿರಬಹುದು. ಅವರು ಬರಪೀಡಿತ ಪ್ರದೇಶದಲ್ಲಿ ಸಾಗುತ್ತಿದ್ದರು. ಭೂಮಿಯಲ್ಲಿ ಎಲ್ಲೆಲ್ಲೂ ಬರ, ಎಲ್ಲೂ ಆಹಾರ ಸಿಗುವ ಸೂಚನೆಯಿರಲಿಲ್ಲ. ಆಹಾರವನ್ನರಸುತ್ತಾ ಸಾಗುತ್ತಿದ್ದ ಅವರ ಸುತ್ತಾಟವೆಲ್ಲಾ ವ್ಯರ್ಥವೇ ಆಗುತ್ತಿತ್ತು. ಕೊನೆಗೆ ಅವರೊಂದು ಪರಯನ ಮನೆ ಕಂಡರು. ಅ ಮನೆಯ ಬಾಗಿಲಲ್ಲಿ ನಿಂತು ಭಿಕ್ಷೆ ಬೇಡಿದರು. ಅವನ ಬಳಿ ಕೊಳೆತು ನಾರುತ್ತಿದ್ದ ಮಾಂಸ ಬಿಟ್ಟು ಬೇರೇನೂ ಇರಲಿಲ್ಲ. ಅದು ಒಬ್ಬ ಯತಿಗೆ ಕೊಡುವ ಆಹಾರವಾಗಿರಲಿಲ್ಲ. ಆದುದರಿಂದ ಆತ, 'ಮನೆಯಲ್ಲಿ ಏನೂ ಆಹಾರವಿಲ್ಲ' ಎಂದ. ವಿಶ್ವಾಮಿತ್ರ ಕಳ್ಳತನದಿಂದ ಅವರ ಮನೆಗೆ ನುಗ್ಗಿ ಆ ಕೊಳೆತ ಮಾಂಸವನ್ನು ತಿಂದು ಹಸಿವು ನೀಗಿಸಿಕೊಂಡು ಜೀವವನ್ನು ಉಳಿಸಿಕೊಂಡರು.

ನಿಧಾನವಾಗಿ ನಾನು ಪವಿತ್ರ ಮಾನಸಸರೋವರವನ್ನು ಸಮೀಪಿಸುತ್ತಿದ್ದೆ. ಸಂಜೆಯಾಗುತ್ತಿತ್ತು, ಅದೃಷ್ಟವಶಾತ್ ರಾತ್ರಿಯನ್ನು ಕಳೆಯಲು ಒಂದು ಗುಡಾರ ಕಣ್ಣಿಗೆ ಬಿತ್ತು. ಆ ಗುಡಾರದಲ್ಲಿ ಒಬ್ಬಿಬ್ಬರು ಭಾರತೀಯರು ಇದ್ದರು. ಬಹುಶಃ ಅವರೂ ಯಾತ್ರಿಕರಿದ್ದಿರಬಹುದು. ಅವರೂ ಮಾನಸಸರೋವರದಲ್ಲಿ ಸ್ನಾನ ಮಾಡಿ, ಕೈಲಾಸಪತಿಯ ದರ್ಶನ ಮಾಡಲೆಂದು ಹೊರಟಿದ್ದರು.

ಮರುದಿನ ಬೆಳಿಗ್ಗೆ ನಿತ್ಯಕರ್ಮಗಳನ್ನೆಲ್ಲಾ ಮುಗಿಸಿ ಉಪಾಹಾರ ಮಾಡಿದ ನಂತರ, ಸರೋವರದ ಕಡೆಗೆ ಹೊರಟೆವು. ಹಿಮಾಲಯ ಪರ್ವತಶ್ರೇಣಿಯ ದಕ್ಷಿಣ ದಿಗಂತದೊಡನೆ ಟಿಬೆಟ್ ಪ್ರಸ್ಥಭೂಮಿ ಸೇರುವ ಜಾಗದಲ್ಲಿ ಆ ವಿಶಾಲವಾದ ಸರೋವರವಿದೆ. ಬೇಗನೆ ನಾವು ಸರೋವರದ ತೀರವನ್ನು ತಲುಪಿದೆವು. ಬಿಸಿಲು ಪ್ರಖರವಾಗಿದ್ದ ಕಾರಣ ವಾತಾವರಣ ಬೆಚ್ಚಗಿತ್ತು. ಸರೋವರದ ನೀರು ಅತ್ಯಂತ ನಿರ್ಮಲವಾಗಿತ್ತು. ನಾನು ಆ ನೀರಿನಲ್ಲಿ ಸ್ನಾನಮಾಡಿ, ಸ್ವಲ್ಪ ಕಾಲ ಈಜಾಡಿದೆ ಕೂಡ. ನಾನು ಈಜುತ್ತಿದ್ದಾಗ ೩-೪ ಅಡಿಗಳಷ್ಟು ದೊಡ್ಡ ಗಾತ್ರದ ಮೀನುಗಳು ನನ್ನ ಸುತ್ತ ಪ್ರೀತಿಯಿಂದ ಸುತ್ತುತ್ತಿದ್ದವು. ಬಹುಶಃ ಅಲ್ಲಿ ಈಜುವ ಎಲ್ಲ ಯಾತ್ರಿಕರೊಡನೆಯೂ ಅವು ಹೀಗೆಯೇ ಸಲುಗೆಯಿಂದಿರಬಹುದು. ನಾನಾ ಬಣ್ಣದ, ಬೇರೆ ಬೇರೆ ಗಾತ್ರದ ಸಾವಿರಾರು ನೀರು ಹಕ್ಕಿಗಳು ಮೀನು ಹಿಡಿಯಲು ನೀರಿನಲ್ಲಿ ಮುಳುಗುಹಾಕುತ್ತಿದ್ದುದನ್ನು ನಾವು ನೋಡಿದೆವು. ಚಳಿಗಾಲದಲ್ಲಿ ಸರೋವರದ ನೀರು ಹೆಪ್ಪುಗಟ್ಟುವುದರಿಂದ ನೀರು ಹಕ್ಕಿಗಳೆಲ್ಲ ಎಲ್ಲೋ ಹೋಗಿ ಬಿಡುತ್ತಿದ್ದವು. ಆಗ ಹಿಮಗಡ್ಡೆಗಳ ಅಡಿಯಲ್ಲಿ ಮೀನುಗಳೆಲ್ಲ ಕ್ಷೇಮವಾಗಿರುತ್ತವೆ.

ತೀಕ್ಷ್ಣ ಬಿಸಿಲಿನಲ್ಲಿ ಈಜು, ಪವಿತ್ರ ಸ್ನಾನ, ನನ್ನಲ್ಲಿ ಹೊಸ ಹುರುಪು – ಉತ್ಸಾಹಗಳನ್ನುಂಟುಮಾಡಿದವು. ನಾನು ಕೈಲಾಸದತ್ತ ನಡಿಗೆ ಮುಂದುವರೆಸಿದೆ. *(ಮುಂದುವರಿಯುವುದು)*





# ಗುರುವಿನ ಆದರ್ಶ ಮತ್ತು ಆಧುನಿಕ ಶಿಕ್ಷಣ

ಡಾ.ಡಿ.ಕೆ. ರಾಜೇಂದ್ರ

**ಆಧುನಿಕ ವಿದ್ಯಾಭ್ಯಾಸದಲ್ಲಿ ಸಾಂಸ್ಕೃತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಆರೋಗ್ಯವಂತ ಸಮಾಜದ ನಿರ್ಮಾಣಕ್ಕೆ ಅತ್ಯಂತ ಆವಶ್ಯಕವೆಂಬ ವಿಚಾರವನ್ನು ಈ ಲೇಖನದಲ್ಲಿ ನಿರೂಪಿಸಲಾಗಿದೆ. ಲೇಖಕರು ಕನ್ನಡದ ಹಿರಿಯ ವಿದ್ವಾಂಸರು ಹಾಗೂ ಸಾಹಿತಿಗಳು.**

ಶಿಕ್ಷಣ ಎಂದೊಡನೆ ಮೊದಲು ನಮ್ಮ ಗಮನಕ್ಕೆ ಬರುವುದು ಗುರು-ಶಿಷ್ಯ ಸಂಬಂಧ. ಈ ಎರಡು ಸಂಬಂಧಗಳ ಮೊತ್ತವೇ ಶಿಕ್ಷಣ. ಈ ಎರಡರ ನಂಟು ಎಷ್ಟು ಗಟ್ಟಿಯಾಗಿರುತ್ತದೊ, ಮೌಲ್ಯಾಧಾರಿತವಾಗಿರುತ್ತದೊ ಅದರಿಂದ ಹೊರಹೊಮ್ಮುವ ಫಲಿತವೂ ಅಷ್ಟೇ ಮೌಲ್ಯಾಧಾರಿತವಾಗಿರುತ್ತದೆ. ಇದಕ್ಕೆ ತನ್ನದೇ ಆದ ಇತಿಹಾಸವಿದೆ, ಪರಂಪರೆಯೂ ಇದೆ. ಪ್ರಾಚೀನ ಕಾಲದಲ್ಲಿ 'ಗುರುಕುಲ' ಪದ್ಧತಿಯ ವಿದ್ಯಾಭ್ಯಾಸ ರೂಢಿಯಲ್ಲಿತ್ತು. ಅಲ್ಲಿ ಗುರುವಿಗೇ ಪ್ರಾಧಾನ್ಯ. ಶಿಷ್ಯನು ಗುರುವಿನ ಮಾರ್ಗದರ್ಶನದಲ್ಲಿ ನಿಜವಾದ ಅರ್ಥದ ಶಿಕ್ಷಣವನ್ನು ಪಡೆಯುತ್ತಿದ್ದ. ಪರಿಪೂರ್ಣ ವ್ಯಕ್ತಿತ್ವದ ನಿರ್ಮಾಣಕ್ಕೆ ಅದು ಕಾರಣವಾಗುತ್ತಿತ್ತು. ವೇದ, ಉಪನಿಷತ್ತುಗಳಂತಹ ಮಹತ್ವದ ಗ್ರಂಥಾಧ್ಯಯನದ ಜೊತೆಗೆ ಇತರ ವಿಷಯಗಳಾದ ಗಣಿತ, ಜ್ಯೋತಿಷ್ಯ, ಖಗೋಳ, ನೀತಿ, ನಾಟ್ಯಕಲೆ, ವೈದ್ಯ ಇತ್ಯಾದಿ ವಿಷಯಗಳ ಅಧ್ಯಯನವೂ ನಡೆಯುತ್ತಿತ್ತು. ಇಲ್ಲೆಲ್ಲಾ 'ಗುರು' ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಾದ ಎಲ್ಲ ವಿಷಯಗಳನ್ನೂ ಬೋಧಿಸಲು ಮುಂದಾಗುತ್ತಿದ್ದರು.

'ಗುರುಕುಲ'ದ ಶಿಕ್ಷಣ ಒಂದೆಡೆಯಾದರೆ, ಮತ್ತೊಂದೆಡೆ ಅರಿವಿಗೇ ಬಾರದೆ ಸಹಜಗತಿಯಲ್ಲಿ ನಡೆಯುತ್ತಿದ್ದ ಶಿಕ್ಷಣ ಪದ್ಧತಿಯೂ ಜಾರಿಯಲ್ಲಿತ್ತು. ಅದೇ ಜಾನಪದ ಶಿಕ್ಷಣ. ಅದರಲ್ಲಿ ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು. ಬದುಕಿಗೆ ಬೇಕಾದ ಎಲ್ಲ ವಿದ್ಯೆಗಳನ್ನು ಇಲ್ಲಿ ಕಲಿಸಲಾಗುತ್ತಿತ್ತು. 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಎಂಬಂತೆ ವ್ಯಕ್ತಿ ಸಂಬಂಧವಾದ ಶಿಕ್ಷಣವನ್ನೂ ಕೊಡುವುದರ ಜೊತೆಗೆ, ವ್ಯಕ್ತಿತ್ವ ನಿರ್ಮಾಣಕ್ಕೆ ಅವಶ್ಯವಾದ, ಮೌಲ್ಯಭರಿತ ನೀತಿಬೋಧನೆಯೂ ಸದ್ದುಗದ್ದಲವಿಲ್ಲದೆ ನಡೆಯುತ್ತಿತ್ತು. ಗುರುಕುಲ ಶಿಕ್ಷಣ ಪದ್ಧತಿಗಿಂತ ಇದು ಭಿನ್ನವಾದುದಾಗಿತ್ತು. ಬದುಕಿನ ಜೊತೆಯಲ್ಲಿಯೇ ಬದುಕನ್ನು ಅರ್ಥಮಾಡಿಕೊಂಡು, ಅದರ ಮೌಲ್ಯಗಳನ್ನು, ಆದರ್ಶಗಳನ್ನು ಮೈದುಂಬಿಕೊಳ್ಳುವುದು ಇಲ್ಲಿಯ ವಿಶೇಷ. ಅದು ಹೆಣ್ಣು-ಗಂಡೆನ್ನದೆ ಇಬ್ಬರಿಗೂ ಸರಿಸಮಾನವಾದುದಾಗಿತ್ತು. 'ಮನೆಗೆದ್ದು ಮಾರುಗೆಲ್ಲು' ಎನ್ನುವಂತೆ, ಮುಂದೆ ಸಮಾಜದಲ್ಲಿ ಸ್ವತಂತ್ರವಾಗಿ ಬದುಕನ್ನು ನಡೆಸಲು ಬೇಕಾದ ಎಲ್ಲ ತರಬೇತಿ ಇಲ್ಲಿ ತಂದೆ-ತಾಯಿ ಮತ್ತು ಮನೆಯ ಹಿರಿಯರಿಂದ ನಡೆಯುತ್ತಿತ್ತು:

ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು । ನನ ದೊರೆಯೆ
ಜ್ಯೋತಿಯೇ ಆಗು ಜಗಕೆಲ್ಲ ॥

ಅತ್ತೆ ಮಾವರ ಪಾದ ಮತ್ತೆ ಗುರುವಿನ ಪಾದ
ಸ್ವಾಮಿ ಚೆಲುವಯ್ಯನ ಸಿರಿಪಾದ । ನೆನೆದಾರೆ
ಬಂದೋಟು ಪಾಪ ಪರಿಹಾರ ॥

ಇದು ಅಲ್ಲಿಯ ಮೌಲ್ಯಾಧಾರಿತ ಬೋಧನೆಯ ಕ್ರಮವಾಗಿತ್ತು. ಅದು ಬದುಕಿನೊಂದಿಗೇ ಅರಳಿ ನಿಂತದ್ದು ಹಾಗೂ ಸಂಸ್ಕಾರಯುತವಾದುದಾಗಿತ್ತು.

ಆದರೆ ಇಂದು ಶಿಕ್ಷಣದ ರೀತಿ ಬದಲಾಗಿದೆ, ನೀತಿ ಬದಲಾಗಿದೆ. ಆಧುನಿಕ ಶಿಕ್ಷಣದ ಕ್ರಮ ಮೇಲಿನ ಎರಡು ಪದ್ಧತಿಗಳಿಗಿಂತ ವಿಭಿನ್ನವೆನಿಸಿದೆ. ಇಂಗ್ಲಿಷ್ ಶಿಕ್ಷಣದ ಪರಿಣಾಮವಾಗಿ ಆಧುನಿಕ ಶಿಕ್ಷಣ ತನ್ನದೇ ಆದ ಹಾದಿಯನ್ನು ಹಿಡಿದಿದೆ. ಒಂದು ರೀತಿಯಲ್ಲಿ ಅದು ವ್ಯಕ್ತಿಯನ್ನು ವೃತ್ತಿಜೀವನಕ್ಕೆ ಅಳವಡಿಸಿ, ಅವನ ಬದುಕಿಗೆ ದಾರಿ ಮಾಡಿಕೊಡುವಲ್ಲಿ ಪರ್ಯವಸಾನಗೊಳ್ಳುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಶಿಕ್ಷಣ ಕ್ರಮದಲ್ಲಿ ಮೇಲಿನ ಎರಡು ಶಿಕ್ಷಣ ಕ್ರಮಗಳಲ್ಲಿ ಇದ್ದ ಆದರ್ಶವಾಗಲಿ, ಗುರಿಯಾಗಲಿ, ನೈತಿಕತೆಯನ್ನು ತುಂಬುವ ಉದ್ದೇಶವಾಗಲಿ ಇಲ್ಲವಾಗಿರುವುದು ದೊಡ್ಡ ದುರಂತವೇ ಆಗಿದೆ. ಹಾಗಾದರೆ ನಾವು ಎಲ್ಲಿ ಎಡವಿದ್ದೇವೆ? ತಪ್ಪಾಗಿರುವುದಾದರೂ

ಎಲ್ಲಿ? ಇದನ್ನು ಸರಿಪಡಿಸುವುದಾದರೂ ಹೇಗೆ? ಇಂತಹ ಹತ್ತಾರು ಪ್ರಶ್ನೆಗಳು ಎದುರಾಗುವುದು ಸಹಜ. ಇದನ್ನು ಕಂಡುಕೊಳ್ಳುವ ಅಗತ್ಯ ಬಹಳವಾಗಿಯೇ ಇದೆ.

ಹಾಗಾದರೆ ನಿಜವಾದ ಶಿಕ್ಷಣವೆಂದರೆ ಯಾವುದು? ಅದು ಹೇಗಿರಬೇಕು? ಅದರಲ್ಲಿ ಯಾರ ಯಾರ ಪಾತ್ರ ಎಷ್ಟು? ಇವುಗಳ ಕಡೆಗೆ ಗಮನ ಹರಿಸುವುದು ಅನಿವಾರ್ಯ.

'ಕನ್ನಡ ವಿಶ್ವಕೋಶ'ದಲ್ಲಿ ಶಿಕ್ಷಣ ಎಂದರೆ ಏನು? ಎನ್ನುವುದರ ಬಗ್ಗೆ ಹೀಗೆ ಉಲ್ಲೇಖವಿದೆ: 'ಸಂಚಿತಜ್ಞಾನ, ಕುಶಲತೆ, ಸಂಸ್ಕೃತಿ ಹಾಗೂ ಮೌಲ್ಯಗಳನ್ನು ಸಮುದಾಯದ ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ವರ್ಗಾಯಿಸುವ ವಿಧಾನವನ್ನು, ಅರ್ಥಾತ್ ಅಪೇಕ್ಷಿತ ಜ್ಞಾನ, ಕುಶಲತೆ, ಮೌಲ್ಯ ಇವೇ ಮೊದಲಾದುವನ್ನು ವ್ಯಕ್ತಿ ಮೈಗೂಡಿಸಿಕೊಳ್ಳುವಂತೆ ಮಾಡುವ ಪ್ರತಿಕ್ರಿಯೆಗಳ ಗುಚ್ಛವನ್ನು ಶಿಕ್ಷಣ ಎಂದು ಉಲ್ಲೇಖಿಸುವುದು ರೂಢಿ' ಎಂದು ಹೇಳಿ, ಅದರ ಮತ್ತೊಂದು ವಿಸ್ತೃತ ಅರ್ಥವನ್ನೊಳಗೊಂಡ ಅಭಿಪ್ರಾಯವನ್ನೂ ಹೀಗೆ ದಾಖಲಿಸಿದೆ: 'ವಿಶ್ವವಿದ್ಯಾನಿಲಯದಲ್ಲಿ ಏನು ಜರುಗುತ್ತದೋ ಅದೇ ಶಿಕ್ಷಣ – ಎಂಬ ಸಂಕುಚಿತ ದೃಷ್ಟಿಕೋನದಿಂದ ಮೊದಲ್ಗೊಂಡು ಜೀವನಾದ್ಯಂತ ಉಂಟುಮಾಡುವ ಎಲ್ಲ ಅನುಭವಗಳ ಸರ್ವ ನಾಮವೇ ಶಿಕ್ಷಣ.' ಹೀಗೆ ಶಿಕ್ಷಣವನ್ನು ಕುರಿತ ವಿಭಿನ್ನ ಅನಿಸಿಕೆಗಳು, ಅಭಿಪ್ರಾಯಗಳು ಸಾಕಷ್ಟು ಪ್ರಮಾಣದಲ್ಲಿ ಹೊರಹೊಮ್ಮಿವೆ.

ಗುರುಕುಲ ಶಿಕ್ಷಣ ಕ್ರಮದಲ್ಲಾಗಲಿ, ಜನರ ಶಿಕ್ಷಣ ಕ್ರಮದಲ್ಲಾಗಲಿ ಅಥವಾ ವಿಶ್ವವಿದ್ಯಾನಿಲಯದ ಶಿಕ್ಷಣ ಕ್ರಮದಲ್ಲಾಗಲಿ, ಯಾವುದನ್ನೇ ಸೂಕ್ಷ್ಮವಾಗಿ ಗಮನಿಸಿದರೂ ಅವುಗಳಲ್ಲಿ 'ಗುರು' ಸಾಮಾನ್ಯ. ಗುರುವಿನ ಮಾರ್ಗದರ್ಶನದಲ್ಲಿಯೇ ಎಲ್ಲವೂ ನಡೆಯಬೇಕೆಂಬ ಉದ್ದೇಶ ಹೊಂದಿರುವುದನ್ನು ಕಾಣುತ್ತೇವೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ಹಿರಿಯೋಕ್ತಿಯೇ ಇದೆ. ಆದರೆ ಅಂತಹ ಗುರುವನ್ನು ಪಡೆಯುವುದಾದರೂ ಹೇಗೆ? ಗುರುವಾದರೂ ಹೇಗಿರಬೇಕು? ಅವನ ಆದರ್ಶಗಳಾದರೂ ಏನು? ಅವನ ಗುಣಗಳಾದರೂ ಏನು? ಸ್ವಾಮಿ ವಿವೇಕಾನಂದರಿಗೆ ಶ್ರೀರಾಮಕೃಷ್ಣರು ದೊರೆತಂತೆ ಎಲ್ಲರಿಗೂ ದೊರೆಯಲು ಏಕೆ ಸಾಧ್ಯವಾಗುತ್ತಿಲ್ಲ? ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿಯೆ ಎದುರಾಗುವುದನ್ನು ಕಾಣುತ್ತೇವೆ. ಹಾಗಾದರೆ ನಿಜವಾದ ಗುರುವಿನ ಶಕ್ತಿ ಎಂತಹುದು?

> **ನಿಜವಾದ ಗುರು ತಪೋಬಲವುಳ್ಳವನಷ್ಟೇ ಅಲ್ಲ,**
> **ಸಾಕ್ಷಾತ್ಕಾರದ ಸವಿಯನ್ನು ಉಂಡವನು.**
> **ಅವನು ಯಾರನ್ನು ತನ್ನ ಶಿಷ್ಯನನ್ನಾಗಿ**
> **ಪ್ರೀತಿಯಿಂದ ಸ್ವೀಕರಿಸುತ್ತಾನೋ**
> **ಅವನಲ್ಲಿ ತನ್ನ ಆಧ್ಯಾತ್ಮಿಕ ಶಕ್ತಿಯನ್ನು**
> **ಮೆಲ್ಲಮೆಲ್ಲನೆ ಹರಿಯಿಸಲಾರಂಭಿಸುತ್ತಾನೆ.**
> **ಶಿಷ್ಯನು ಗುರುವಿನ ಬೋಧನೆಯ ಪ್ರಕಾರ**
> **ಸಾಧನೆಯನ್ನು ಮಾಡುತ್ತ ಬಂದಂತೆ**
> **ಗುರುಶಕ್ತಿ ಪ್ರವಹಿಸುವುದು ತೀವ್ರವಾಗುತ್ತದೆ.**
>
> *(ಸ್ವಾಮಿ ಪುರುಷೋತ್ತಮಾನಂದ)*

ವಿದ್ಯೆಯಲ್ಲಿ ಪ್ರಧಾನವಾಗಿ ನಾವು ಗುರುತಿಸಬಹುದಾದ – ಲೌಕಿಕವಿದ್ಯೆ, ಅಲೌಕಿಕ ವಿದ್ಯೆಗಳೆರಡಕ್ಕೂ ಇದು ಅನ್ವಯಿಸುವಂತಹುದು. ಎರಡರಲ್ಲಿಯೂ ಗುರುವಿನ ಸ್ಥಾನ ಒಂದೇ. ಐಹಿಕ ಜೀವನದ ವಿವರಗಳನ್ನೊಳಗೊಂಡ ಲೌಕಿಕ ವಿದ್ಯೆ, ಆಧ್ಯಾತ್ಮಿಕ ಜೀವನದ ಮರ್ಮವನ್ನು ತಿಳಿಸುವ ಅಲೌಕಿಕ ವಿದ್ಯೆ – ಇವೆರಡೂ ಬೇರೆ ಬೇರೆ ಎನಿಸಿದರೂ ಪರಿಪೂರ್ಣ ವ್ಯಕ್ತಿತ್ವದ ಜೀವನಕ್ಕೆ ಎರಡೂ ಮುಖ್ಯವೆ. ಇವೆರಡೂ ಒಂದಕ್ಕೊಂದು ಪೂರಕ, ಪ್ರೇರಕವಾದಾಗ ಮಾತ್ರ ಬದುಕು ಹಾಗೂ ವ್ಯಕ್ತಿತ್ವ ಪೂರ್ಣವೆನಿಸಲು ಸಾಧ್ಯ. ಆಧ್ಯಾತ್ಮಿಕ ವಿದ್ಯೆಯೆಂದರೆ ಪೂರ್ಣ ಅದರಲ್ಲಿಯೇ ಮುಳುಗಿ ಲೌಕಿಕವನ್ನು ಕಡೆಗಣಿಸುವುದೆಂದಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ 'ಅನುಷ್ಠಾನ ವೇದಾಂತ' ದ ಅರಿವು ಮುಖ್ಯ. ಅವರ ದೃಷ್ಟಿಯಲ್ಲಿ ಪ್ರಯೋಜನಕ್ಕೆ ಬಾರದ ಯಾವುದೊಂದು ವಿದ್ಯೆಯೂ ಅಪ್ರಯೋಜಕ. ಅದು ನಮ್ಮಲ್ಲಿರುವ ಸಂಕುಚಿತ ಭಾವನೆಗಳನ್ನು ತೊಡೆದುಹಾಕಿ ವಿಶಾಲತೆಯನ್ನು ಮೂಡಿಸುವಂತಿರಬೇಕು. ಅಧ್ಯಾತ್ಮವಿದ್ಯೆ ಕೇವಲ ಒಬ್ಬ ವ್ಯಕ್ತಿಯ ಅಥವಾ ಒಂದು ಸಮೂಹದ ಪ್ರಯೋಜನಕ್ಕೆ ಕಾರಣವಾದರಷ್ಟೇ ಸಾಲದು. ಅದು ಎಲ್ಲರ ಪ್ರಯೋಜನಕ್ಕೂ ಬರುವಂತಾಗಬೇಕು ಎಂಬ ಹಿನ್ನೆಲೆಯಲ್ಲಿ ಅವರು ಹೇಳುವ: 'ಧರ್ಮದ ರಹಸ್ಯವಿರುವುದು ಸಿದ್ಧಾಂತದಲ್ಲಲ್ಲ, ಅದರ ಅನುಷ್ಠಾನದಲ್ಲಿ. ಒಳ್ಳೆಯವರಾಗಿರುವುದು, ಒಳ್ಳೆಯದನ್ನು ಮಾಡುವುದು – ಇದೇ ಧರ್ಮದ ರಹಸ್ಯ' ಎಂಬ ಮಾತಿನ ಅರಿವನ್ನು ಸರ್ವರಲ್ಲಿಯೂ ಮನದಟ್ಟಾಗಿಸಬಲ್ಲ ಗುರುವಿನ ಅಗತ್ಯವಿದೆ. ಈ ಒಂದು ದೃಷ್ಟಿಯಿಂದ ನೋಡುವಾಗ ಸ್ವಾಮಿ ವಿವೇಕಾನಂದರು ಗುರುವಿನ ಗುರುವಾಗಿ ಒಬ್ಬ ಆದರ್ಶ ಗುರುವೆನಿಸುತ್ತಾರೆ. ಲೌಕಿಕ-ಅಲೌಕಿಕಗಳೆರಡನ್ನೂ ಅಂತರ್ಗತವಾಗಿಸಿಕೊಂಡು ಪ್ರತಿಯೊಬ್ಬರ ಒಳಿತಿಗೆ ಶ್ರಮಿಸುವ ಮನೋಭಾವದ ಗುರುವೇ ನಿಜವಾದ ಗುರು. ಪಠ್ಯದಲ್ಲಿರುವುದನ್ನು ಬೋಧಿಸಿ, ಅರ್ಥಹೇಳಿ, ವಿವರಣೆ ಕೊಡುವವನು ಎಂದಿಗೂ ನಿಜವಾದ ಗುರುವೆನಿಸಲಾರ. ಆ ಮೂಲಕ ಶಿಷ್ಯನ ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆಗೆ ಶಕ್ತಿ ತುಂಬಿದಾಗ ಮಾತ್ರ ನಿಜವಾದ ಗುರುವೆನಿಸಲು ಸಾಧ್ಯ.

ಇದಲ್ಲದೆ ಪ್ರತಿಯೊಬ್ಬರಲ್ಲಿಯೂ ಅಂತರ್ಯಾಮಿಯಾದ ಗುರುವೊಬ್ಬ ಇದ್ದೇ ಇರುತ್ತಾನೆ. ಆದರೆ ಅದರತ್ತ ನಾವು ಕಿವಿಯನ್ನಾಗಲಿ, ಮನಸ್ಸನ್ನಾಗಲಿ ಹರಿಸುವುದೇ ಇಲ್ಲ. 'ಬುದ್ಧಿ-ಮನಸ್ಸು' ಇಲ್ಲದ ಯಾವೊಬ್ಬ ವ್ಯಕ್ತಿಯೂ ಇರಲು ಸಾಧ್ಯವಿಲ್ಲ. ಅವೆರಡರಲ್ಲಿ ಹೊಂದಾಣಿಕೆಯುಂಟಾದರೆ ಬದುಕು ನಿರಾಳವೆನಿಸುತ್ತದೆ. ಇತರರಿಗೂ ಅದರಿಂದ ಒಳಿತಾಗುತ್ತದೆ. ಆದರೆ ನಾವು ಸೋಲುವುದು ಇಲ್ಲಿಯೇ. ಬುದ್ಧಿ ಸೂಚಿಸಿದ್ದನ್ನು ಅನೇಕ ವೇಳೆ ಮನಸ್ಸು ತಿರಸ್ಕರಿ

ಸುತ್ತದೆ, ಹಾಗೆಯೇ ಮನಸ್ಸು ಹೇಳಿದ್ದನ್ನು ಬುದ್ಧಿ ಅಲ್ಲಗಳೆಯುತ್ತದೆ. ಇಂತಹ ಸಂದರ್ಭದಲ್ಲಿಯೇ ಅಂತರ್ಯಾಮಿಯಾದ ಗುರುವಿನ ಅಗತ್ಯ ಗೋಚರಿಸುವುದು. ಸ್ವಾಮಿ ಪುರುಷೋತ್ತಮಾನಂದರ ಮಾತು ಇಲ್ಲಿ ಉಲ್ಲೇಖಾರ್ಹ:

**ಸರ್ವರಲ್ಲಿಯೂ ಅಂತರ್ಯಾಮಿಯಾಗಿರುವ**
**ಸಚ್ಚಿದಾನಂದಗುರುವೇ ನಿಜವಾದ ಗುರು**
**ಆತ ಜನ್ಮಜನ್ಮಗಳಿಂದಲೂ ನಮ್ಮೊಂದಿಗೇ ಇದ್ದು**
**ಸುಖ ಕೊಟ್ಟೂ ಪಾಠ ಕಲಿಸುತ್ತಾನೆ,**
**ಕಷ್ಟ ಕೊಟ್ಟೂ ಪಾಠ ಕಲಿಸುತ್ತಾನೆ,**
**ನಾವು ಸತ್ಕಾರ್ಯ ಮಾಡುವುದನ್ನೂ ನೋಡುತ್ತಾನೆ,**
**ನಾವು ದುಷ್ಕಾರ್ಯ ಮಾಡುವುದನ್ನೂ ನೋಡುತ್ತಾನೆ !**
**ಆ ಎರಡರ**
**ಸಿಹಿ-ಕಹಿ ಫಲಗಳನ್ನುಣ್ಣುವಾಗ ಕೇಳುತ್ತಾನೆ -**
**''ಹೇಗಿದೆ ಸಿಹಿ?''**
**''ಹೇಗಿದೆ ಕಹಿ?''**
**ಆ ಅಂತರ್ಯಾಮಿಗುರು ಕಲಿಸುವ ಪಾಠ**
**ವೈವಿಧ್ಯಮಯ! ವೈಚಿತ್ರ್ಯಪೂರ್ಣ!**

'ಬದುಕು ಎಲ್ಲವನ್ನೂ ಕಲಿಸುತ್ತದೆ' ಎಂಬ ಮಾತಿದೆ. ಅಂದರೆ ಅದರಲ್ಲಿ ಉಂಟಾಗುವ ಏರಿಳಿತಗಳು, ಕಷ್ಟ-ನಷ್ಟಗಳು ಸುಖ-ದುಃಖ ಗಳು ನಮಗೆ ಸಂತೋಷವನ್ನು ಕೊಡುವಂತೆಯೇ, ಎಚ್ಚರಿಕೆಯ ಗಂಟೆಯನ್ನೂ ಬಾರಿಸುತ್ತವೆ. ಆದರೆ ನಾವು ಅದಕ್ಕೆ ಕಿವಿಗೊಡದೆ ಮುನ್ನುಗ್ಗುತ್ತೇವೆ. ನಮ್ಮಲ್ಲೊಬ್ಬ ಅಂತರ್ಯಾಮಿ ಗುರುವಿದ್ದಾನೆ ಎಂಬುದನ್ನು ಮರೆಯುತ್ತೇವೆ.

ಸ್ವಾಮಿ ವಿವೇಕಾನಂದರು ಹೇಳಿದ 'ಅನುಷ್ಠಾನ ವೇದಾಂತ'ದ ಸಾರದಂತೆಯೇ ಕುವೆಂಪು ಅವರು ಹೇಳಿದ:

**ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?**
**ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?**

ಎಂಬ ಮಾತಿನಲ್ಲಿಯೂ ನಮ್ಮ ಮನದಲ್ಲಿ ಮನೆಮಾಡಿರುವ ಗುರುವಿನ ಬಗ್ಗೆ ಸೂಚನೆಯಿದೆ. ಎದೆಯ ದನಿ ನಿಜವಾದ ಗುರು, ಮಾರ್ಗದರ್ಶಕ. ನಾವು ಮಾಡಬಹುದಾದ ಅನೇಕ ಪಾಪಕಾರ್ಯ ಗಳಿಗೆ ತಡೆಯುಂಟು ಮಾಡಲು ಅದು ಪ್ರಯತ್ನಿಸುತ್ತದೆ. ಮುಂದಾಗ ಬಹುದಾದ ಅನಾಹುತದ ಬಗೆಗೆ ಎಚ್ಚರಿಸುತ್ತದೆ. ಹಿಂದೆ ಅನುಭವಿ ಸಿದ ಕಷ್ಟನಷ್ಟಗಳ ಬಗೆಗೆ ಗಮನ ಹರಿಸುವಂತೆ ಮಾಡುತ್ತದೆ. ಆದರೆ ಆ ಅಂತರ್ಯಾಮಿ ಗುರುವಿನ ಮಾತಿಗೆ ನಾವು ಕಿವುಡರಾಗುತ್ತೇವೆ. ವಿವೇಕಶೂನ್ಯರಾಗಿ ಅನ್ಯಮಾರ್ಗವನ್ನು ತುಳಿಯುವಂತಾಗುತ್ತದೆ. ಆದ್ದರಿಂದ ಹೊರಗಿನ ಗುರುವಿನ ಮಾರ್ಗದರ್ಶನದಷ್ಟೇ ನಮ್ಮ ಅಂತರಂಗದ ಅಂತರ್ಯಾಮಿ ಗುರುವಿನ ಮಾರ್ಗದರ್ಶನವೂ ಆವಶ್ಯಕವಾಗಿದೆ.

**ಆಧುನಿಕ ಶಿಕ್ಷಣ!**

'ವಿದ್ಯಾಭ್ಯಾಸವೆಂದರೆ ಮಾನವನಲ್ಲಿರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು' ಎಂಬುದು ಸ್ವಾಮಿ ವಿವೇಕಾನಂದರ ಮಾತು. ಮಾನವನ ಸಂಪೂರ್ಣ ಅಭಿವೃದ್ಧಿಯೇ ವಿದ್ಯಾಭ್ಯಾಸದ ಗುರಿಯಾಗ ಬೇಕು. ಅವನಲ್ಲಿರುವ ಕಲ್ಮಷಗಳನ್ನು ಹೊರಹಾಕಿ, ನಿಜವಾದ ಮನುಷ್ಯನನ್ನಾಗಿ ಮಾಡುವುದೇ ನಿಜವಾದ ವಿದ್ಯೆ.

ಆದರೆ, ಇಂದಿನ ವಿದ್ಯಾಭ್ಯಾಸ ವ್ಯಕ್ತಿಯ ಬೌದ್ಧಿಕತೆಯನ್ನು ಹೆಚ್ಚಿಸುವಲ್ಲಿ ಅದನ್ನು ಶಿಖರದೆತ್ತರಕ್ಕೆ ಕೊಂಡೊಯ್ಯುವಲ್ಲಿ ಯಶಸ್ವಿ ಯಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಡಾ. ರಾಧಾ ಕೃಷ್ಣನ್ ಅವರು ಹೇಳುವಂತೆ ಮನುಷ್ಯ ನೀರಿನಲ್ಲಿ ಮೀನಿನಂತೆ ಈಜುವುದನ್ನು ಕಲಿತ, ಆಕಾಶದಲ್ಲಿ ಹಕ್ಕಿಯಂತೆ ಹಾರಾಡುವುದನ್ನು ಕಲಿತ, ಆದರೆ ಭೂಮಿಯ ಮೇಲೆ ಮಾನವ ಮಾನವನಾಗಿ ನಡೆ ಯುವುದನ್ನು ಕಲಿಯಲಿಲ್ಲ ಎಂಬ ಮಾತಿನಲ್ಲಿ ತುಂಬ ಅರ್ಥ ವಂತಿಕೆ ಇದೆ. ನಾವು ವಿದ್ಯೆಯ ಮೂಲಕ ಅಸಾಧ್ಯವೆನಿಸಿದ್ದನ್ನು ಸಾಧ್ಯವಾಗಿಸುತ್ತ ಬಂದಿದ್ದೇವೆ, ಆದರೆ ಸುಲಭದಲ್ಲಿ ಸಾಧ್ಯವಾಗ ಬಹುದಾದು ದನ್ನು ಸಾಧ್ಯವಾಗಿಸುವಲ್ಲಿ ಸೋತಿದ್ದೇವೆ.

ಆಧುನಿಕ ಶಿಕ್ಷಣ ಭೌತಿಕ ಬದುಕಿಗೆ ಬೇಕಾದುದೆಲ್ಲವನ್ನೂ ನೀಡಿದೆ, ಆದರೆ ಮನುಷ್ಯನಲ್ಲಿ ಅಗತ್ಯವಾಗಿ ಇರಬೇಕಾದ ಮೌಲ್ಯ ಗಳನ್ನು ಅದು ಕಸಿದುಕೊಂಡಿದೆ. ಅದು ಯಂತ್ರಮಾನವರನ್ನು ಸೃಷ್ಟಿ ಸುತ್ತದೆ. ನೈತಿಕ ಪ್ರಜ್ಞೆಯನ್ನು ಕಡೆಗಣಿಸಿ, ಜ್ಞಾನದ ಪರಿಧಿಯನ್ನು ವಿಸ್ತರಿಸುತ್ತ ಅದರಲ್ಲಿ ಖುಷಿಪಡುವ ಪ್ರವೃತ್ತಿ ಇಂದಿನ ಶಿಕ್ಷಣ ಕ್ರಮ ದಲ್ಲಿ ಗೋಚರಿಸುತ್ತಿರುವುದು ಒಳ್ಳೆಯ ಲಕ್ಷಣವಲ್ಲ. ಇಷ್ಟಕ್ಕೆಲ್ಲ ಕಾರಣ ಆಧುನಿಕ ಜೀವನಶೈಲಿ. ನೈತಿಕತೆ, ಆಧ್ಯಾತ್ಮಿಕತೆ, ಸಂವೇದನಾತ್ಮಕ ಮನೋಭಾವ ಮೂಲೆಗುಂಪಾಗುತ್ತಿವೆ. ಇವೆಲ್ಲದರಿಂದಾಗಿ, ''ವಿದ್ಯಾಭ್ಯಾಸವನ್ನು ಮುಗಿಸಿದ ಮೇಲೆ ಸ್ತ್ರೀಪುರುಷರು ಸ್ವಾರ್ಥಿ ಗಳೂ ಆತ್ಮಕೇಂದ್ರಿತ ವ್ಯಕ್ತಿಗಳೂ ಆಗಿ, ತಮ್ಮ ಸುಖವನ್ನು ಲಾಭವನ್ನೂ, ನೋಡಿ ಕೊಳ್ಳುತ್ತಾ ಬಗೆ ಬಗೆಯ ಕಾರ್ಯಗಳಲ್ಲಿ, ಭ್ರಷ್ಟಾಚಾರಗಳಲ್ಲಿ ತೊಡಗಿ ಕೊಂಡು, ತಮ್ಮ ಜವಾಬ್ದಾರಿ ಸ್ಥಾನದಿಂದ ಕರ್ತವ್ಯರೂಪದಲ್ಲಿ ಸಲ್ಲ ಬೇಕಾದ ಸೇವೆಯನ್ನು ಸಲ್ಲಿಸದೇ ಹೋದಾಗ, ಅದು ಅತ್ಯಂತ ಹೇಯವಾದ ದ್ರೋಹವಾಗುತ್ತದೆ.'' *(ಸ್ವಾಮಿ ರಂಗನಾಥಾನಂದ, ಪರಿ ವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು, ಸಂ. ೩, ಪು. ೨೨೬)*

ಸ್ವಾಮಿ ವಿವೇಕಾನಂದರು ೧೮೯೪ ರಲ್ಲಿ ಬರೆದ ಒಂದು ಪತ್ರದಲ್ಲಿ ಇದನ್ನು ಅತ್ಯಂತ ಖಾರವಾಗಿ ಉಲ್ಲೇಖಿಸುತ್ತಾರೆ: 'ಎಲ್ಲಿಯವರೆಗೆ ಮಿಲಿಯಗಟ್ಟಲೆ ಜನರು ಹಸಿವಿನಿಂದ, ಅಜ್ಞಾನದೊಡನೆ ಬದುಕು ತ್ತಿರುತ್ತಾರೋ, ಅಲ್ಲಿಯವರೆಗೂ ಅವರದೇ ದುಡಿಮೆಯ ಹಣದಿಂದ ವಿದ್ಯಾಭ್ಯಾಸ ಮಾಡಿಯೂ ಅವರನ್ನು ಉದಾಸೀನವಾಗಿ ಕಾಣುವ ಪ್ರತಿಯೊಬ್ಬನನ್ನೂ ನಾನು ದ್ರೋಹಿಯೆನ್ನುತ್ತೇನೆ' *(ಸ್ವಾಮಿ ವಿವೇಕಾ ನಂದರ ಕೃತಿಶ್ರೇಣಿ, ಸಂಪುಟ ೫, ಪು.೫೮)*

ಇದಕ್ಕೆಲ್ಲ ಮುಖ್ಯ ಕಾರಣ, ಇಂದಿನ ವಿದ್ಯಾಭ್ಯಾಸ ಕ್ರಮದಲ್ಲಿ ಸಮರ್ಪಕವಾದ ಸಮತೂಕದ ಪಥ್ಯದ ಕೊರತೆ. ಆಧುನಿಕ ಶಿಕ್ಷಣ ಕೇವಲ ಬೌದ್ಧಿಕತೆಯನ್ನು ಹೆಚ್ಚಿಸಿ, ಜ್ಞಾನವನ್ನು ವಿಸ್ತರಿಸುವ ಕೆಲಸವನ್ನು ಮಾಡುವುದರತ್ತ ಗಮನ ಹರಿಸುತ್ತ ಬಂದಿರುವುದು. ಅವರ ಮಾನಸಿಕ, ನೈತಿಕ ಹಾಗೂ ಆಧ್ಯಾತ್ಮಿಕತೆಯನ್ನು ನಿರ್ಲಕ್ಷಿಸುತ್ತಿರುವುದು. ಶಿಕ್ಷಣದ ಒಂದು ತುದಿ ಜ್ಞಾನಾರ್ಜನೆ, ಮತ್ತೊಂದು ತುದಿ ಶೀಲಾರ್ಜನೆಯಾದಾಗಲೇ ಶಿಕ್ಷಣ ಪೂರ್ಣಗೊಳ್ಳಲು ಸಾಧ್ಯ. ಇಂದಿನ ವಿದ್ಯಾರ್ಥಿಗಳು, ಹಾಗೂ ದುಡಿಮೆಗೆ ಕೈಹಾಕಿದವರು ದಾರಿ ತಪ್ಪುವುದಕ್ಕೆ ಇದೇ ಮುಖ್ಯ ಕಾರಣ. ತಂದೆ-ತಾಯಿಗಳು ಒತ್ತು ಕೊಡುವುದೂ ಮಕ್ಕಳ ಅಂಕಪಟ್ಟಿಯ ಕಡೆಗೆ, ಶಾಲಾಕಾಲೇಜುಗಳೂ ಹೆಚ್ಚು ಗಮನ ಕೊಡುವುದೂ ಅಲ್ಲಿಯ ಫಲಿತಾಂಶದ ಕಡೆಗೆ. ಆ ಮೂಲಕ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡು ವಿದ್ಯಾರ್ಥಿಗಳನ್ನು ಆಕರ್ಷಿಸುವ ದೃಷ್ಟಿ ಇವರದ್ದಾದರೆ, ಮಕ್ಕಳು ಉತ್ತಮ ಅಂಕ ಪಡೆದು ಒಳ್ಳೆಯ ಕೆಲಸ ಪಡೆಯುವಂತಾಗಲಿ ಎಂಬುದು ಪೋಷಕರದ್ದು. ಈ ಮಧ್ಯೆ ನೈತಿಕತೆ, ಜೀವನಮೌಲ್ಯಗಳು, ಆದರ್ಶ, ದೇವರು, ಧರ್ಮ, ದೇಶ ಭಾಷೆ ಎಲ್ಲವೂ ಗಾಳಿಗೆ ತೂರಿ ಹೋದಂತಾಗಿದೆ. ''ಮಾನವ ನಿರ್ಮಾಪಕ ವಿದ್ಯಾಭ್ಯಾಸದ ತತ್ತ್ವವೆಂದರೆ ಸುಖನಾಶದ ಋಷಿಗಳನ್ನು ಅಥವಾ ಲೋಕಾತೀತ ಸಂತರನ್ನು ಬೆಳೆಸುವ ನರ್ಸರಿಯೇನೂ ಅಲ್ಲ. ಅದರ ವ್ಯಾಪ್ತಿಯೆಂದರೆ ಇಲ್ಲೇ ಈಗಲೇ ಮಾನವನ ಸಂಪೂರ್ಣ ಅಭಿವೃದ್ಧಿಯನ್ನು ಸಾಧಿಸುವುದು.'' *(ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು , ಸಂಪುಟ ೩, ಪು. ೨೨೭).*

ಆಧುನಿಕ ಶಿಕ್ಷಣ ದುಬಾರಿಯಾಗುವುದರ ಜೊತೆಗೆ ಹೆಚ್ಚು ಹೆಚ್ಚು ಕಮರ್ಷಿಯಲ್ ಕೂಡ ಆಗುತ್ತಿದೆ. ಒಬ್ಬ ವ್ಯಕ್ತಿ ಡಾಕ್ಟರ್ ಆಗಲು, ಇಂಜಿನಿಯರ್ ಆಗಲು ಕಣ್ಣು ಮುಚ್ಚಿ ಹಣ ಖರ್ಚು ಮಾಡುವ ವಾತಾವರಣ ನಿರ್ಮಾಣವಾಗಿದೆ. ಅಷ್ಟೇ ಏಕೆ? ನರ್ಸರಿಯಿಂದ ಆರಂಭವಾಗುವ ಶಿಕ್ಷಣಕ್ಕೆ ಹಣ ಒದಗಿಸುವುದು ಮಧ್ಯಮ ವರ್ಗದವರಿಗೇ ಎಟುಕಲಾರದ ತುತ್ತಾಗಿದೆ. ಹೇಳಬೇಕೆಂದರೆ ಆಧುನಿಕ ಶಿಕ್ಷಣ ಒಂದು ರೀತಿಯಲ್ಲಿ ಶ್ರೀಮಂತರ ಸ್ವತ್ತಾಗಿ ಭಾಸವಾಗುತ್ತಿದೆ. 'ಕಮರ್ಷಿಯಲ್' ಎನಿಸಿದ್ದೆಲ್ಲವೂ ಸಹಜವಾಗಿಯೇ ದುಬಾರಿಯೆನಿಸುವುದು ಅನಿವಾರ್ಯ. ಇದನ್ನು ತಪ್ಪಿಸಲು ನಮ್ಮ ಶಿಕ್ಷಣ ಕ್ರಮದಲ್ಲಿ ಸಾಕಷ್ಟು ಬದಲಾವಣೆ ತರುವುದರ ಆವಶ್ಯಕತೆ ಇದೆ. ''ನಮ್ಮ ವಿಶ್ವವಿದ್ಯಾನಿಲಯಗಳು ತಮ್ಮಲ್ಲಿರುವ ಪ್ರಬೋಧಕರುಗಳ ಹಾಗೂ ಇನ್ನಿತರರ ಮೂಲಕ ಈ ನಾಲ್ಕು ಮುಖ್ಯವಾದ ಅಂಶಗಳ ಬಗ್ಗೆ ಬೌದ್ಧಿಕವಾಗಿ ಎಚ್ಚೆತ್ತುಕೊಂಡರೆ ಮಾತ್ರ ಭವಿಷ್ಯದೆಡೆಗೆ ರಾಷ್ಟ್ರದ ಮುನ್ನಡೆಯ ಮುಂಚೂಣಿಯಲ್ಲಿರುವ ಅವುಗಳ ಸ್ಥಾಪಕೋದ್ದೇಶಗಳು ಸಾರ್ಥಕವಾಗುವುದು. ಆಗ ಮಾತ್ರ ಅವು ವಿದ್ಯಾರ್ಥಿಗಳಿಗೆ ಕೇವಲ ಮಾಹಿತಿ ಕೊಡುವ ಬದಲು ಸ್ಫೂರ್ತಿಯನ್ನು ತಂದುಕೊಡಲು ಸಮರ್ಥವಾಗುತ್ತವೆ.'' *(ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು ಸಂ. ೩, ಪು.೨೨೨)* ಎಂದು ಹೇಳಿ ಉಲ್ಲೇಖಿಸಿರುವ ನಾಲ್ಕು ಅಂಶಗಳತ್ತ ಅಗತ್ಯವಾಗಿ ಗಮನಹರಿಸಬೇಕಾಗಿದೆ: ಮೊದಲನೆಯದಾಗಿ, ವಿದ್ಯಾಭ್ಯಾಸವು ನಮ್ಮ ರಾಷ್ಟ್ರದ ಪ್ರಾಚೀನ ಸಂಸ್ಕೃತಿ ಸಂಪ್ರದಾಯಗಳ ಗುಣದೋಷಗಳ ಮೇಲೆ ಹಿಡಿತವುಳ್ಳದ್ದಾಗಿರಬೇಕು. ಎರಡನೆಯದಾಗಿ, ಪಾಶ್ಚಾತ್ಯ ಸಂಸ್ಕೃತಿಯ ಗುಣದೋಷಗಳ ಮೇಲೂ ವಿವೇಚನಯುಕ್ತ ಹಿಡಿತವುಳ್ಳದ್ದಾಗಿರಬೇಕು. ಮೂರನೆಯದಾಗಿ, ವಿದ್ಯಾಭ್ಯಾಸವು ಪ್ರಚಲಿತ ಭಾರತದ ವಾಸ್ತವಿಕ ಪರಿಸ್ಥಿತಿಯ ಮೇಲೂ ಹಿಡಿತವುಳ್ಳದ್ದಾಗಿರಬೇಕು. ನಾಲ್ಕನೆಯದಾಗಿ, ಜನರಿಗೆ ಹೊಸ ಯುಗದ ಒಂದು ಅಭಿವೃದ್ಧಿಶೀಲ ಭಾರತೀಯ ಸಮಾಜವನ್ನು ಕಟ್ಟುವ ಕೆಲಸದಲ್ಲಿ ಇಂದು ಪ್ರಪಂಚದಾದ್ಯಂತ ಹರಡಿ ನೆಲೆನಿಂತಿರುವ ಪಾಶ್ಚಾತ್ಯ ಸಂಪ್ರದಾಯಗಳ ಪರೀಕ್ಷಿತ ಪ್ರಬಲ ಅಂಶಗಳನ್ನೂ ನಮ್ಮ ಆರ್ಷೇಯ ಭಾರತೀಯ ಸಂಪ್ರದಾಯಗಳ ಪುಟವಿಟ್ಟ ಚಿನ್ನದಂತಹ ಮೂಲಾಂಶಗಳನ್ನೂ ಸಹಜವಾಗಿ ಒಂದುಗೂಡಿಸಿಕೊಳ್ಳುವುದಕ್ಕೆ ಸಹಾಯ ಮಾಡಬೇಕು. *(ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು, ಸಂಪುಟ ೩, ಪು.೨೨೦)*

ಶಿಕ್ಷಣ ಕೇವಲ ಒಬ್ಬ ವ್ಯಕ್ತಿಯ ವೈಯಕ್ತಿಕ ಬದುಕನ್ನು ರೂಪಿಸಿದರೆ ಸಾಲದು, ಅದು ಅವನ ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣವಾಗುವಂತಿದ್ದು ಮೇಲೆ ಉದ್ಧರಿಸಿದ ನಾಲ್ಕು ಅಂಶಗಳನ್ನು ಗರ್ಭೀಕರಿಸಿಕೊಂಡದ್ದಾಗಿರಬೇಕು. ಕೇವಲ ಅಂಕಗಳಿಂದ ಒಬ್ಬ ವ್ಯಕ್ತಿಯ ಶ್ರೇಷ್ಠತೆಯನ್ನು, ಅರ್ಹತೆಯನ್ನು ಗುರುತಿಸುವುದರ ಜೊತೆಗೆ ಅವನ ಆಂತರ್ಯದ ಮೌಲಿಕತೆಯನ್ನು ಗುರುತಿಸುವಂತಾಗಬೇಕು. ಶಿಕ್ಷಣದ ಮುಖ್ಯ ಗುರಿ ಮಾನವನ ವಿಕಾಸ. ಅವನ ನೈತಿಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಗೆ ಅದು ಪ್ರಚೋದನೆ ನೀಡುವಂತಿರಬೇಕು. ''ನೈತಿಕ ಬೆಳವಣಿಗೆಯಿಲ್ಲದ ಕೇವಲ ಬೌದ್ಧಿಕ ಬೆಳವಣಿಗೆ ಕಚ್ಚಾ ಅಹಂನ್ನು ಹೆಚ್ಚಾಗಿ ಕೊಬ್ಬಿಸುತ್ತದೆ... ಪ್ರೇಮ, ದಯೆ, ಕಾರುಣ್ಯಗಳಿಂದ ಅವನ ಹೃದಯವನ್ನು ಶ್ರೀಮಂತಗೊಳಿಸದೆ ಕೇವಲ ಬೌದ್ಧಿಕ ವಿದ್ಯಾಭ್ಯಾಸದಿಂದ ನಿಶಿತಮತಿಯನ್ನಾಗಿಸಿದರೆ ಅವನ ಬುದ್ಧಿ ತನ್ನ ಸ್ವಂತಹಿತಾಸಕ್ತಿಯನ್ನುಳಿದು ಇತರ ಎಲ್ಲಾ ಮೌಲ್ಯಗಳನ್ನೂ ಧಿಕ್ಕರಿಸಿ ಕೊನೆಗೆ ಸರ್ವತಿರಸ್ಕಾರಿಯಾಗಿ ಜಡವಾಗಿಬಿಡುತ್ತದೆ; ಇದು ಆಧ್ಯಾತ್ಮಿಕ ಸಾವನ್ನು ಸೂಚಿಸುತ್ತದೆ. ವಿಕಾಸದ ಉತ್ತುಂಗದಲ್ಲಿರುವ ಮಾನವನಲ್ಲಿ ಇದು ಬೌದ್ಧಿಕ ಸಾವಿಗಿಂತಲೂ ಘೋರವಾದದ್ದು.'' *(ಪರಿವರ್ತನಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು: ಸಂಪುಟ ೩, ಪು.೨೩೨)*

ಶಿಕ್ಷಣದಲ್ಲಿ ಬೌದ್ಧಿಕ ಬೆಳವಣಿಗೆಗಷ್ಟೇ ಒತ್ತುಕೊಟ್ಟು ಜೀವನ ಮೌಲ್ಯಗಳ ಕಡೆಗೆ ಹಾಗೂ ಮಾನಸಿಕ ಶಕ್ತಿಯ ಕಡೆಗೆ ಗಮನಹರಿಸದೆ ಹೋದರೆ ಏನಾಗುತ್ತದೆ ಎಂಬುದನ್ನು ಮೇಲಿನ ಮಾತುಗಳು ಎಚ್ಚರಿಸುತ್ತವೆ. ವ್ಯಕ್ತಿ ಸ್ವಾರ್ಥಿಯಾಗಿ ಬೇರೆಲ್ಲವನ್ನೂ ಕಡೆಗಣಿಸುತ್ತಾನೆ. ಉಳಿದೆಲ್ಲ ಭಾವನೆಗಳೂ ಶೂನ್ಯವಾಗಿ ಸ್ವಂತ ಸುಖಕ್ಕಷ್ಟೇ ದಾಸನಾಗುತ್ತಾನೆ. ಸೌಲಭ್ಯಗಳ ಗುಲಾಮನಾಗುತ್ತಾನೆ. ''ಸೌಲಭ್ಯಗಳು ಎಂಬ ಭಾವನೆಯೇ ಮಾನವ ಬಾಳಿನ ಕೆಟ್ಟ ವಿಷ... ಯಾವಾಗ ಈ ವಿಶೇಷ